## 1. ಸಂತಾಪ ಸೂಚನೆ

**ಮಾನ್ಯ ಸಭಾಧ್ಯಕ್ಷರು:**

ರಾಜ್ಯದ ಮಾಜಿ ಸಚಿವರಾಗಿದ್ದ ವಿ.ಎಲ್. ಪಾಟೀಲ್ ಅವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸ-ಬಯಸುತ್ತೇನೆ.

ವಿ.ಎಲ್ ಪಾಟೀಲ್ ಅವರು ದಿನಾಂಕ 22ನೇ ಮಾರ್ಚ್ 1922 ರಲ್ಲಿ ಬೆಳಗಾವಿ ಜಿಲ್ಲೆ ರಾಯಬಾಗ್ ತಾಲ್ಲೂಕು ಬ್ಯಾಕೂಡ್‌ನಲ್ಲಿ ಜನಿಸಿರುತ್ತಾರೆ. ಕೊಲ್ಲಾಪುರದ ರಾಜಾರಾಂ ಕಾಲೇಜಿನಲ್ಲಿ ಪದವಿಯನ್ನು ಪೂರೈಸಿದರಲ್ಲದೆ ಅಥ್ಲೆಟಿಕ್ ಕ್ರೀಡೆಯಲ್ಲಿ ಅಪಾರ ಸಾಧನೆ ಮಾಡಿದವರಾಗಿದ್ದರು.

ದಿವಂಗತರು ವೃತ್ತಿಯಲ್ಲಿ ಕೃಷಿಕರಾಗಿದ್ದು, ಸ್ವಾತಂತ್ರ್ಯ ಹೋರಾಟದ ಚಳುವಳಿಯಲ್ಲಿ ಭಾಗವಹಿಸುವುದರ ಮೂಲಕ ರಾಜಕೀಯಕ್ಕೆ ಪಾದಾರ್ಪಣೆ ಮಾಡಿದ್ದರು.1945 ರಲ್ಲಿ **'ಶಿಕ್ಷಣ ಪ್ರಸಾರಕ ಮಂಡಳಿ'** ಸ್ಥಾಪಿಸುವುದರ ಮೂಲಕ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ **"ಅಕ್ಷರ ದಾಸೋಹಿ"** ಎಂಬ ಹೆಸರನ್ನು ಗಳಿಸಿದ್ದರು.

1952ರಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಬಾಂಬೆ ವಿಧಾನಸಭೆಗೆ ಆಯ್ಕೆಗೊಂಡಿದ್ದು, ರಾಜ್ಯಗಳ ಪುನರ್ವಿಂಗಡಣೆ ನಂತರ ಮೈಸೂರು ರಾಜ್ಯದ ಮೊದಲನೇ ವಿಧಾನಸಭೆಯ ಸದಸ್ಯರೆನಿಸಿಕೊಂಡಿದ್ದರಲ್ಲದೆ ಮೈಸೂರು ರಾಜ್ಯದ ಎರಡನೇ ವಿಧಾನಸಭೆಗೂ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು. ನಂತರ 1962 ರಲ್ಲಿ ಚಿಕ್ಕೋಡಿ ಕ್ಷೇತ್ರದಿಂದ ಎರಡನೇ ಲೋಕಸಭೆಗೆ ಆಯ್ಕೆಗೊಂಡು ಸೇವೆ ಸಲ್ಲಿಸಿರುತ್ತಾರೆ ಹಾಗೂ 1974 ರಿಂದ 1977 ರವರೆಗೆ ರಾಜ್ಯಸಭಾ ಸದಸ್ಯರಾಗಿದ್ದರು, ತದನಂತರ ಲೋಕಸಭಾ ಸದಸ್ಯರಾಗಿ ಆಯ್ಕೆಗೊಂಡು ಕೇಂದ್ರದಲ್ಲಿ ಕೈಗಾರಿಕಾ ಅಭಿವೃದ್ಧಿ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ. 1967, 1972, 1983 ಮತ್ತು 1985 ರಲ್ಲಿ ಕ್ರಮವಾಗಿ ನಾಲ್ಕು, ಐದು, ಏಳು ಮತ್ತು ಎಂಟನೇ ವಿಧಾನಸಭೆಗೆ ಚುನಾಯಿತರಾಗಿದ್ದು, ಆ ಅವಧಿಯಲ್ಲಿ ಸಮಾಜ ಕಲ್ಯಾಣ, ತೋಟಗಾರಿಕೆ, ಸಾರಿಗೆ, ಕಂದಾಯ, ಕೈಗಾರಿಕೆ ಮತ್ತು ನಗರಾಭಿವೃದ್ಧಿಯಂತಹ ಮಹತ್ವದ ಖಾತೆಗಳ ಸಚಿವರಾಗಿ ದಿವಂಗತರು ಕಾರ್ಯನಿರ್ವಹಿಸಿರುತ್ತಾರೆ.

ವಿ.ಎಲ್. ಪಾಟೀಲ್ ಅವರು ಹೋರಾಟದ ಮನೋಭಾವನೆಯನ್ನು ಹೊಂದಿದವರಾಗಿದ್ದು, ಸಾರ್ವಜನಿವಾಗಿ **ರಾಯಬಾಗದ ಹುಲಿ** ಎಂದೇ ಗುರುತಿಸಿಕೊಂಡಿದ್ದರು.

ದಿನಾಂಕ 18.06.2012 ರಂದು ಬೆಂಗಳೂರಿನ ವಿಧಾನಸಭೆಯ ಸಭಾಂಗಣದಲ್ಲಿ ನಡೆದ ವಿಧಾನಸಭೆಯ 60ನೇ ವರ್ಷದ ವಜ್ರಮಹೋತ್ಸವ ಸಮಾರಂಭದಲ್ಲಿ ದಿವಂಗತರನ್ನು ಪ್ರಥಮ ವಿಧಾನಸಭೆಯ ಸದಸ್ಯರೆಂದು ಗುರುತಿಸಿ ಸನ್ಮಾನಿಸಲಾಗಿತ್ತು.

ವಿ.ಎಲ್. ಪಾಟೀಲ್ ಅವರು ದಿನಾಂಕ 09.12.2012 ರಂದು ನಿಧನ ಹೊಂದಿರುತ್ತಾರೆ.

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು)**:- ಮಾನ್ಯ ಅಧ್ಯಕ್ಷರೆ, ಮಾನ್ಯ ವಿ.ಎಲ್. ಪಾಟೀಲ್‌ರವರ ನಿಧನದ ಈ ಸಂದರ್ಭದಲ್ಲಿ ತಾವೇನು ಸಂತಾಪ ಸೂಚನೆಯನ್ನು ತೆಗೆದುಕೊಂಡು ಬಂದಿದ್ದೀರಿ ಅದಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಮಾಜಿ ಸಚಿವರಾದ ಮಾನ್ಯ ವಿ.ಎಲ್. ಪಾಟೀಲ್‌ರವರು ಬಹುಶ: ರಾಜಕಾರಣದಲ್ಲಿ ಬಹಳ ದೊಡ್ಡ ವ್ಯಕ್ತಿತ್ವವನ್ನು ಗಳಿಸಿಕೊಂಡು ಬಂದಿದ್ದರು. ರಾಜಕಾರಣದಲ್ಲಿ ಬಹಳ ಅನುಭವವನ್ನು ಹೊಂದಿದ್ದು ಜನಪ್ರತಿನಿಧಿಯಾಗಿ ಬಹಳ ವರ್ಷಗಳ ಕಾಲ ಸೇವೆ ಮಾಡಿದ್ದು ಅವರು ಬೆಳಗಾಂ ಜಿಲ್ಲೆಯವರಾಗಿದ್ದರು. ಅವರು ವಿಧಾನಸಭೆ, ರಾಜ್ಯಸಭೆ ಮತ್ತು ಲೋಕಸಭಾ ಸದಸ್ಯರಾಗಿ ಬಹಳ ವರ್ಷಗಳ ಕಾಲ ಕಾರ್ಯನಿರ್ವಹಿಸಿ ಜನಸೇವೆಯನ್ನು ಮಾಡಿದ್ದರು.ಪಾರ್ಲಮೆಂಟ್ ವ್ಯವಸ್ಥೆಯಲ್ಲಿ ಸಾಕಷ್ಟು ಅನುಭವವನ್ನು ಪಡೆದುಕೊಂಡಿದ್ದವರಾಗಿದ್ದರು. ಅವರು ೧೯೭೨ರಲ್ಲಿ ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿದ್ದರು. ೧೯೭೨ ರಿಂದ ೧೯೭೪ ರವರೆಗೆ ರಾಜಸಭಾ ಸದಸ್ಯರೂ ಆಗಿದ್ದರು ಮತ್ತು ನಾಲ್ಕು ಬಾರಿ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿದ್ದರು. ಬಹಳ ಮುಖ್ಯವಾಗಿ ಅವರು ಮಹತ್ವದ ಇಲಾಖೆಗಳಲ್ಲಿ ಸಚಿವರಾಗಿ ಕೆಲಸವನ್ನು ಮಾಡಿದ್ದರು. ಸಮಾಜ ಕಲ್ಯಾಣ ಇಲಾಖೆಯಿರಬಹುದು, ತೋಟಗಾರಿಕೆ ಇಲಾಖೆಯಿರಬಹುದು, ಸಾರಿಗೆ ಇಲಾಖೆ, ಕಂದಾಯ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆ ಹಾಗೂ ನಗಾರಾಭಿವೃದ್ಧಿ ಇಲಾಖೆ, ಈ ರೀತಿ ಬಹಳ ಪ್ರಮುಖವಾದ ಇಲಾಖೆಗಳಲ್ಲಿ ಸಚಿವರಾಗಿ ಕಾರ್ಯನಿರ್ವಹಿಸಿ ಆ ಇಲಾಖೆಗಳಲ್ಲಿ ತಮ್ಮ ಆಡಳಿತದ ವೈಖರಿಯ

ಛಾಪನ್ನು ಮೂಡಿಸಿ ಉತ್ತಮ ಆಡಳಿತಗಾರರಾಗಿ ಕೆಲಸವನ್ನು ಮಾಡಿದ್ದರು. ಇಡೀ ಸಮಾಜದ ಮೇಲೆ ಬಹಳಷ್ಟು ಹಿಡಿತವನ್ನು ಹೊಂದಿ ತಮ್ಮ ಛಾಪನ್ನು ಮೂಡಿಸಿದಂಥವರು ವಿ.ಎಲ್. ಪಾಟೀಲ್‌ರವರಾಗಿದ್ದರು. ಹಿಂದುಳಿದ ವರ್ಗದ ನಾಯಕರಾಗಿ ಹಿಂದುಳಿದ ವರ್ಗದವರ ಬಗ್ಗೆ ಇರುವಂಥ ತಮ್ಮ ಕಳಕಳಿ ಮತ್ತು ಹಿಂದುಳಿದ ವರ್ಗಗಳಿಗೆ ಸರ್ಕಾರದಿಂದ ಸಿಗಬೇಕಾದಂಥಸವಲತ್ತುಗ-ಳರಬಹುದು ಮತ್ತು ಇನ್ನಿತರ ಸವಲತ್ತುಗಳನ್ನು ಕೊಡಿಸುವ ಬಗ್ಗೆ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾನ್ಯ ವಿ.ಎಲ್. ಪಾಟೀಲ್‌ರವರು ಮಾಡುತ್ತಿದ್ದರು. ಹೀಗಾಗಿ ಅವರು ರಾಜಕಾರಣದಲ್ಲಿ ಅತ್ಯಂತ ಹೆಚ್ಚು ನುರಿತ ಮತ್ತು ಅನುಭವಿ ರಾಜಕಾರಣಿಯಾಗಿ ಬೆಳೆದು ಬಂದಂಥವರಾಗಿದ್ದರು. ಹೀಗಾಗಿ ಅವರಿಗೆ ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳುವ ವಿಚಾರದಲ್ಲಿ ಒಂದು ಸ್ಪಷ್ಟತೆ ಇರುತ್ತಿತ್ತು. ಇದಲ್ಲದೇ ಯಾವುದೇ ಒಂದು ನಿರ್ಧಾರಗಳನ್ನು ಅನುಷ್ಠಾನ ಮಾಡುವುದರಲ್ಲಿ ತಮ್ಮ ಧೈರ್ಯವನ್ನು ತೋರಿಸುತ್ತಿದ್ದರು. ಈ ಭಾಗದ ಸಮಸ್ಯೆಗಳ ಬಗ್ಗೆ ಯಾವಾಗಲೂ ತಮ್ಮ ಧ್ವನಿಯನ್ನು ಎತ್ತುತ್ತಿದ್ದರು. ಹೀಗಾಗಿ ಅವರನ್ನು ರಾಯಭಾಗದ ಹುಲಿ ಎಂದೇ ಜನರು ಕರೆಯುತ್ತಿದ್ದರು. ಇವರು ಜನಸಾಮಾನ್ಯರ ಬಗ್ಗೆ, ಬಡವರ ಬಗ್ಗೆ ಅಪಾರವಾದಂಥ ಗೌರವವನ್ನು ಇಟ್ಟುಕೊಂಡಿದ್ದರು. ಆ ರೀತಿಯ ಕಾರ್ಯ-ಚಟುವಟಿಕೆಗಳನ್ನು ಅವರು ಮಾಡಿಕೊಂಡು ಬಂದರು. ಹೀಗಾಗಿ ಅವರು ಈ ಭಾಗದಲ್ಲಿ ಅತ್ಯಂತ ಜನಪ್ರಿಯ ನಾಯಕರಾಗಿ ಬೆಳೆದು ಬಂದರು. ಅವರು ಹಲವಾರು ಚುನಾವಣೆ-ಗಳಲ್ಲಿ ಸತತವಾಗಿ ಗೆಲುವನ್ನು ಪಡೆದುಕೊಂಡು ಜನಪ್ರಿಯತೆಯನ್ನು ಬಹಳಷ್ಟು ವರ್ಷಗಳವರೆಗೆ ಮೇನ್‌ಟೇನ್ ಮಾಡಿಕೊಂಡು ಬಂದಿದ್ದರು ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗ ಅವರ ಮಕ್ಕಳು ಕೂಡ ರಾಜಕಾರಣದಲ್ಲಿ ಸಾಕಷ್ಟು ಬೆಳೆದು ಬಂದರು. ಆ ರೀತಿಯ ಒಂದು ಕುಟುಂಬ ಈ ಭಾಗದ ರಾಜಕೀಯದಲ್ಲಿ ಬಹಳಷ್ಟು ಪ್ರಭಾವ ಹೊಂದಿದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಹೀಗಾಗಿ ವಿ.ಎಲ್. ಪಾಟೀಲ್‌ರವರು ಈಗ ನಿಧನರಾಗಿ ನಮ್ಮನ್ನೆಲ್ಲ ಅಗಲಿರುವುದು ಬಹಳ ದು:ಖವನ್ನು ತಂದಿದೆ. ಒಬ್ಬ ಹಿಂದುಳಿದ ವರ್ಗದ ನಾಯಕರನ್ನು ನಾವೆಲ್ಲರೂ ಕಳೆದುಕೊಂಡಿದ್ದೇವೆ. ಇದರಿಂದಾಗಿ ರಾಜಕೀಯ ವ್ಯವಸ್ಥೆಯಲ್ಲಿ ಇಂದು ಸಾಕಷ್ಟು ನಷ್ಟವಾಗಿದೆ ಎನ್ನುವಂಥ ಮಾತನ್ನು ಈ

ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. ನಾನು ದಿವಂಗತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ ಮತ್ತು ಅವರ ಅಗಲಿಕೆಯಿಂದ ಅವರ ಕುಟುಂಬ ವರ್ಗಕ್ಕೆ ಆಗಿರುವ ದುಃಖವನ್ನು ಭರಿಸುವಂಥ ಶಕ್ತಿಯನ್ನು ದೇವರು ದಯಪಾಲಿಸಲೆಂದು ನಾನು ಭಗವಂತನಲ್ಲಿ ಪ್ರಾರ್ಥನೆಯನ್ನು ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):-** ಮಾನ್ಯ ಅಧ್ಯಕ್ಷರೆ, ದಿವಂಗತ ಎ.ಎಲ್. ಪಾಟೀಲ್‌ರವರು ನಿನ್ನೆ ತಾನೆ ನಮ್ಮನ್ನೆಲ್ಲ ಅಗಲಿದ್ದಾರೆ. ಅವರು ಸಾರ್ವಜನಿಕ ಜೀವನದಲ್ಲಿ ಬಹಳ ದೀರ್ಘ ಕಾಲ ಸೇವೆಯನ್ನು ಸಲ್ಲಿಸಿದ್ದರು. ಅವರಿಗೆ ೯೦ ವರ್ಷಗಳಾಗಿತ್ತು. ವಿದ್ಯಾರ್ಥಿ ದಿಸೆಯಲ್ಲಿಯೇ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಸ್ವಾತಂತ್ರ್ಯ ನಂತರ ೧೯೫೨ ರಲ್ಲಿ ನಡೆದ ಮೊದಲನೆಯ ಸಾರ್ವತ್ರಿಕ ಚುನಾವಣೆಯಲ್ಲಿ ಮಹಾರಾಷ್ಟ್ರ ಅಸೆಂಬ್ಲಿಗೆ ಆಯ್ಕೆಯಾಗಿದ್ದರು. ಆಮೇಲೆ ಏಕೀಕರಣವಾದ ಮೇಲೆ ಎರಡನೆಯ ಸಾರ್ವತ್ರಿಕ ಚುನಾವಣೆಯಲ್ಲಿ ಚಿಕ್ಕೋಡಿಯಿಂದ ಲೋಕಸಭೆಗೆ ಆಯ್ಕೆಯಾಗಿದ್ದರು. ಆಗ ಮೈಸೂರು ರಾಜ್ಯವಿತ್ತು. ನಂತರ ಇವರು ಮತ್ತೆ ರಾಯಭಾಗ ಕ್ಷೇತ್ರದಿಂದ ಐದಾರು ಬಾರಿ ಆಯ್ಕೆಯಾಗಿದ್ದರು. ಇವರು ಬೆಳಗಾಂ ಜಿಲ್ಲೆಯಲ್ಲಿ ಬಹಳ ಗಟ್ಟಿಯಾದಂಥ ನಾಯಕತ್ವವನ್ನು ಬೆಳೆಸಿಕೊಂಡಿದ್ದರು. ೧೯೮೩ ರಲ್ಲಿ ಜನತಾ ಪಾರ್ಟಿಯನ್ನು ಸೇರಿಕೊಂಡಿದ್ದರು. ಅದಕ್ಕೆ ಮೊದಲು ಕಾಂಗ್ರೆಸ್‌ನಲ್ಲಿದ್ದರು, ರಾಮಕೃಷ್ಣ ಹೆಗಡೆಯವರ ಮಂತ್ರಿಮಂಡಲದಲ್ಲಿ ಕಂದಾಯ ಸಚಿವರಾಗಿದ್ದರು. ಸಮಾಜ ಕಲ್ಯಾಣ ಇಲಾಖಾ ಸಚಿವರಾಗಿದ್ದರು. ಹೀಗೆ ಅನೇಕ ಖಾತೆಗಳನ್ನು ಅವರು ನಿರ್ವಹಿಸಿದ್ದರು.

ಶ್ರೀ ವೀರೇಂದ್ರ ಪಾಟೀಲ್, ಶ್ರೀ ದೇವರಾಜ್ ಅರಸು ಹಾಗೂ ಶ್ರೀ ರಾಮಕೃಷ್ಣ ಹೆಗಡೆ ಈ ಮೂರು ಜನ ಮುಖ್ಯಮಂತ್ರಿಗಳ ಜೊತೆಯಲ್ಲಿ ಕೆಲಸ ಮಾಡಿ ಅಪಾರವಾದಂತಹ ಅನುಭವ ಇತ್ತು. ಇಲ್ಲಿ ಅವರನ್ನು ಅಣ್ಣಾವರು ಎಂದು ಕರೆಯುತ್ತಿದ್ದರು. ಮಾನ್ಯ ಉಮೇಶ್ ಕತ್ತಿಯವರು ರಾಜಕಾರಣಕ್ಕೆ ಬರುವುದಕ್ಕೆ ಮುಂಚೆ ಬೆಳಗಾಂನಲ್ಲಿ ಅವರು senior politician ಹಾಗೂ ಒಳ್ಳೆಯ ಕ್ರೀಡಾಪಟುವಾಗಿದ್ದರು. ಅವರು ದೊಡ್ಡ ಶ್ರೀಮಂತ ಕುಟುಂಬದಿಂದ ಬಂದವರು. ಕೊಲ್ಲಾಪುರದಲ್ಲಿ ಅವರು ಬಿ.ಎ. ಪದವಿ ಮಾಡಿದ್ದರು. ಅವರು ಶಾಸಕರ ದಿನಾಚರಣೆ ದಿನ ಒಂದು ಸಾರಿ

ನಮ್ಮ ಜೊತೆ ಕ್ರಿಕೆಟ್ ಆಡುವುದಕ್ಕೆ ಬಂದು ಬಹಳ ಚೆನ್ನಾಗಿ ಆಡಿದರು. ಅವರು ಶಾಟ್ ಹೊಡೆಯುವಾಗ ಪ್ಯಾಂಟ್ ಹರಿದು ಹೋಯಿತು, ಈಗಲೂ ಅದರ ಜ್ಞಾಪಕ ನನಗೆ ಇದೆ. ಆಗ ಅವರಿಗೆ ೬೫ನೇ ವರ್ಷವಾಗಿತ್ತು. ನಾವೆಲ್ಲ ನಾಚಿಕೊಳ್ಳುವ ಮಟ್ಟಿಗೆ ಕ್ರಿಕೆಟ್ ಆಡಿದರು, ಅಷ್ಟರಮಟ್ಟಿಗೆ ಗಟ್ಟಿಮುಟ್ಟಾಗಿದ್ದರು. ಶಿಕ್ಷಣ ಕ್ಷೇತ್ರದಲ್ಲಿ ಕೂಡ ಅಪಾರವಾದ ಕೆಲಸ ಮಾಡಿದರು. ೧೯೪೫ರಲ್ಲಿ ಶಿಕ್ಷಣ ಪ್ರಸಾರಕ ಮಂಡಳಿ ಎಂದು ಹೇಳಿ ಸ್ವಾತಂತ್ರ್ಯ ಪೂರ್ವದಲ್ಲಿ ಒಂದು ಸಂಸ್ಥೆಯನ್ನು ಸ್ಥಾಪನೆ ಮಾಡಿದ್ದರು. ಅಲ್ಲಿ ಹೈಸ್ಕೂಲುಗಳು, ಯೂನಿವರ್ಸಿಟಿ, ಬೇರೆ ಬೇರೆ ಕಾಲೇಜುಗಳನ್ನು ತೆರೆದು ಆ ಭಾಗದಲ್ಲಿರುವ ಶಿಕ್ಷಣದಿಂದ ವಂಚಿತರಾಗಿರುತಕ್ಕಂಥ ಹಿಂದುಳಿದ ವರ್ಗದ ಮಕ್ಕಳಿಗೆ ಶಿಕ್ಷಣವನ್ನು ಕೊಡತಕ್ಕಂಥ ಪ್ರಯತ್ನವನ್ನು ಕೂಡ ಮಾಡಿದರು. ಸಹಕಾರ ಕ್ಷೇತ್ರದಲ್ಲಿ ಕೂಡ ಕೆಲಸ ಮಾಡಿದರು. ರಾಯಭಾಗ್‌ನಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಿ, ಅದರ ಅಧ್ಯಕ್ಷರಾಗಿ ಬಹಳ ವರ್ಷಗಳ ಕಾಲ ಕೆಲಸ ಮಾಡಿದರು. ಅವರಿಗೆ ರೈತರ ಬಗ್ಗೆ ಬಹಳ ಕಾಳಜಿ ಇತ್ತು. ಇವರನ್ನು ಬೆಳಗಾಂ ಹುಲಿ, ರಾಯಭಾಗ್ ಹುಲಿ ಎಂದು ಕರೆಯುತ್ತಿದ್ದರು. ಇವತ್ತು ಬೆಳಗ್ಗೆನಾನು ರಾಯ್‌ಭಾಗ್‌ಗೆ ಹೋಗಿಬಂದೆ. ಅಲ್ಲಿ ಜನರೆಲ್ಲರೂ ಹುಲಿ ಹೊರಟುಹೋಯಿತು, ರಾಯಭಾಗ್ ಹುಲಿ ಸತ್ತು ಹೋಯಿತು ಎಂದು ಹೇಳುತ್ತಿದ್ದರು. ಅಷ್ಟರಮಟ್ಟಿಗೆ ರಾಯಭಾಗ್ ಜಿಲ್ಲೆಯಲ್ಲಿ ಅವರ ಛಾಪನ್ನು ಮೂಡಿಸಿದ್ದರು. ಹಳೇ ಮೈಸೂರಿನ ಕಡೆ ರಾಜಕೀಯ ಛಾಪನ್ನು ಮೂಡಿಸಿರಲಿಲ್ಲ. ಬಿಜಾಪುರ, ಬಾಗಲಕೋಟೆ, ಬೆಳಗಾಂ ಈ ಭಾಗದಲ್ಲಿ ಅವರಿಗೆ ನಾಯಕತ್ವ ಇತ್ತು, ದೊಡ್ಡ following ಇತ್ತು, ಆ ರೀತಿ ರಾಜಕೀಯ ಛಾಪನ್ನು ಮೂಡಿಸಿದ್ದರು. ಇಷ್ಟರಷ್ಟು ದೀರ್ಘ ಕಾಲ ರಾಜಕೀಯ ಮಾಡಿದವರು ಬಹಳ ವಿರಳ ಎಂದು ನನಗೆ ಅನಿಸಿತ್ತು. ೧೯೫೨ರಿಂದ ಇತ್ತೀಚವರೆಗೂ ರಾಜಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದರು. ವಿಧಾನಸಭೆಗೆ ೬೦ ವರ್ಷ ತುಂಬಿದಾಗ ಮೂರು ಅಥವಾ ನಾಲ್ಕು ಜನ ಹಿರಿಯ ಶಾಸಕರನ್ನು ಕರೆಸಿ ಗೌರವಿಸಿದ್ದರು. ಆಗ ಅವರು ಚೆನ್ನಾಗಿಯೇ ಇದ್ದರು. ಅಂದು ಶ್ರೀ ಐ.ಯು. ಮಾದಪ್ಪ, ಚಾಮರಾಜನಗರದ ಶಾಸಕರೊಬ್ಬರು, ಇವರು ಮತ್ತು ತಿಪಟೂರಿನ ಶಾಸಕರೊಬ್ಬರು, ಇವರೆಲ್ಲರನ್ನು ನಾವೆಲ್ಲ ಸೇರಿ ವಿಧಾನಸಭೆಯಲ್ಲಿ ಸನ್ಮಾನ ಮಾಡಿದ್ದೆವು. ಅವತ್ತು ಆರೋಗ್ಯವಾಗಿ ಇದ್ದರು. ಆದರೆ ಇವತ್ತು ನಮ್ಮ

ಜೊತೆಯಲ್ಲಿ ಇಲ್ಲ. ಅವರು ತುಂಬು ಜೀವನವನ್ನು ಮತ್ತು ಸಾರ್ಥಕವಾದಂತಹ ಜೀವನವನ್ನು ಮಾಡಿದ್ದಾರೆ. ಅವರು ರಾಜಕೀಯ ಮುತ್ಸದ್ಧಿಯಾಗಿದ್ದರು ಎಂದು ಇವತ್ತು ನಾವು ನೆನಪಿಸಿಕೊಳ್ಳಬೇಕಾಗುತ್ತದೆ. ಅವರು ಇವತ್ತು ನಮ್ಮನ್ನಗಲಿದ್ದಾರೆ. ಅವರಿಗೆ ಮೂರು ಜನ ಗಂಡುಮಕ್ಕಳು ಹಾಗೂ ಒಬ್ಬ ಹೆಣ್ಣುಮಗಳು ಇದ್ದರು. ಅವರ ಮಕ್ಕಳಲ್ಲಿ ಒಬ್ಬರು ನಮ್ಮ ಪಾರ್ಟಿಯಲ್ಲಿ ಇದ್ದಾರೆ. ಅವರು ಲೋಕಸಭೆ ಸದಸ್ಯರು ಹಾಗೂ ಜಿಲ್ಲಾಪಂಚಾಯತ್ ಅಧ್ಯಕ್ಷರೂ ಆಗಿದ್ದರು. ಕಳೆದ ಬಾರಿ ಕೂಡ ಲೋಕಸಭೆ ಚುನಾವಣೆಗೆ ನಿಂತಿದ್ದರು. ಅವರದು ರಾಜಕೀಯ ಮನೆತನ ಮತ್ತು ದೊಡ್ಡ ಹಿನ್ನೆಲೆಯಿರುವಂತಹ ಶ್ರೀಮಂತ ಕುಟುಂಬ.ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ. ಅವರ ಕುಟುಂಬ ವರ್ಗದವರಿಗೆಲ್ಲ ಅವರ ಅಗಲಿಕೆಯ ದು:ಖವನ್ನು ಭರಿಸುವಂತಹ ಶಕ್ತಿ ಕೊಡಲಿ ಎಂದು ದೇವರಲ್ಲಿ ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಬಂಡೆಪ್ಪ ಕಾಶೆಂಪೂರ್** :- ಮಾನ್ಯ ಅಧ್ಯಕ್ಷರೆ, ರಾಜ್ಯದ ಮಾಜಿ ಸಚಿವರಾಗಿದಂತಹ ವಿ.ಎಲ್. ಪಾಟೀಲ್‌ರವರು ನಿನ್ನೆ ನಿಧನವಾಗಿರುವುದು ನಿಜಕ್ಕೂ ರಾಜ್ಯಕ್ಕೆ ನಷ್ಟವಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅವರು ವಿಶೇಷವಾಗಿ ಹಿಂದುಳಿದ ವರ್ಗದ ಹಾಲುಮತಕ್ಕೆ ಸೇರಿದ ಒಬ್ಬ ಧೀಮಂತ ನಾಯಕ. ಮಾನ್ಯ ಸಿದ್ದರಾಮಯ್ಯನವರು ಹೇಳಿದಂತೆ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಬೀದರ್‌ನಿಂದ ಹಿಡಿದು ಇಲ್ಲಿಯರವರೆಗೂ ನಾವು ಚಿಕ್ಕವರಿದ್ದಾಗ ಈ ಒಂದು ಸಮಾಜದ ಬಗ್ಗೆ ಒಂದು ಮಾತು ಬಂದತಕ್ಷಣ ವಿ.ಎಲ್.ಪಾಟೀಲ್ ಹೆಸರು ಹೇಳುತ್ತಿದ್ದೆವು. ಅವರು ಬಹಳ ಶ್ರೀಮಂತ ಮನೆತನದವರು. ಅವರನ್ನು ಬೆಳಗಾಂ ಹುಲಿ, ರಾಯಭಾಗ್ ಹುಲಿ ಎಂದು ಏನು ಹೇಳುತ್ತಿದ್ದರು, ಆ ಹೆಸರು ಸುಮ್ಮನೆ ಬರುವುದಿಲ್ಲ. ಅಷ್ಟೊಂದು ಹೆಸರು ಗಳಿಸಿಕೊಳ್ಳಬೇಕೆಂದರೆ ಅವರು ಕ್ಷೇತ್ರದಲ್ಲಿ ತಮ್ಮದೇ ಆದಂತಹ ಸಾಧನೆಯನ್ನು ಮಾಡಿದ್ದರು. ಅವರಿಗೆ ೯೦ ವರ್ಷವಾಗಿತ್ತು, ವಿಧಾನಸಭೆ ೬೦ ವರ್ಷದ ಆಚರಣೆಯನ್ನು ಮಾಡಿದಂತಹ ಸಂದರ್ಭದಲ್ಲಿ ಅವರನ್ನು ಸನ್ಮಾನ ಮಾಡುವುದಕ್ಕೆ ಕರೆಸಿದಂತಹ ಸಂದರ್ಭದಲ್ಲಿ ಅವರು ಮುಂದಿನ ಕುರ್ಚಿಯಲ್ಲಿ ಕುಳಿತುಕೊಂಡಾಗ ನಾವು ಅವರ ಹಿಂದಿನಿಂದ

ಹೋಗಿ ಭೇಟಿ ಮಾಡಿದಾಗ ನಮ್ಮನ್ನು ಗುರುತು ಹಿಡಿದು ಮಾತನಾಡಿದರು ಮತ್ತು ಸನ್ಮಾನವನ್ನು ಸ್ವೀಕಾರ ಮಾಡಿದರು. ಅವರು ಕನ್ನಡಕ ಕೂಡ ಹಾಕುತ್ತಿರಲಿಲ್ಲ, ೯೦ ವರ್ಷವಾದರೂ ಕೂಡ ಅಷ್ಟೊಂದು ಗಟ್ಟಿಯಾಗಿದ್ದರು. ಅವರು ನಿನ್ನೆ ಸಾಯಂಕಾಲ ನಿಧನ ಹೊಂದಿದ್ದಾರೆ. ನಿಜಕ್ಕೂ ಅವರು ಒಬ್ಬ good parliamentarian. ಏಕೆಂದರೆ ಅವರ ಇತಿಹಾಸ ನೋಡಿದರೆ ಹಲವಾರು ಸಲ ಅಸೆಂಬ್ಲಿಗೆ ನಂತರ ಲೋಕಸಭೆಗೆ ಕೂಡ ಆಯ್ಕೆಯಾಗಿದ್ದರು. ಅವರು ಸಮಾಜ ಕಲ್ಯಾಣ ಇಲಾಖೆ ಸಚಿವರಾಗಿದ್ದಾಗ ಅವರು ಮಾಡಿರುವಂತಹ ಕೆಲಸವನ್ನು ನಮ್ಮ ಕಡೆಯ ಜನ ಇನ್ನೂ ಕೂಡ ನೆನಪಿಸಿಕೊಳ್ಳುತ್ತಾರೆ. ಬೀದರ್, ಗುಲ್ಬರ್ಗ ಕಡೆಯಲೆಲ್ಲಾ ಸರ್ಟಿಫಿಕೇಟ್‌ಗೆ ಸಂಬಂಧಪಟ್ಟಂತೆ ಅವರು open ಆಗಿ ನಿಂತುಕೊಂಡು ಈ ಜನರಿಗೆ ತೊಂದರೆಯಾಗಬಾರದು ಎನ್ನುವ ನಿಟ್ಟಿನಲ್ಲಿ ಆದೇಶ ಕೊಟ್ಟು ಅದನ್ನು ಪಾಲನೆ ಮಾಡಿದ್ದನ್ನು ಇವತ್ತಿಗೂ ಜನ ನೆನಪಿಸಿಕೊಳ್ಳುತ್ತಾರೆ. ತಮ್ಮದೇ ಆದಂತಹ ವ್ಯಕ್ತಿತ್ವವನ್ನು ಹೊಂದಿದ್ದರು. ಅವರ ನಿಧನದಿಂದ ಇವತ್ತು ಎಲ್ಲರಿಗೂ ದು:ಖವಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಕುಟುಂಬಕ್ಕೆ ಅವರ ನಿಧನದಿಂದ ಆಗಿರುವಂತಹ ದು:ಖವನ್ನು ಸಹಿಸುವಂತಹ ಶಕ್ತಿಯನ್ನು ನೀಡಲಿ ಎಂದು ಹೇಳುತ್ತಾ, ತಾವು ತಂದಿರುವ ಸಂತಾಪ ಸೂಚನೆಗೆ ಬೆಂಬಲವನ್ನು ಸೂಚಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿಯವರು):-** ಮಾನ್ಯ ಅಧ್ಯಕ್ಷರೆ, ಮಾನ್ಯ ವಿ.ಎಲ್. ಪಾಟೀಲ್‌ರವರಿಗೆ ರಾಯಭಾಗದ ಹುಲಿ ಎನ್ನುವ ಹೆಸರು ಸುಮ್ಮನೆ ಬರುವುದಕ್ಕೆ ಸಾಧ್ಯವಿಲ್ಲ. ಅವರು ಇಡೀ ಜೀವನದಲ್ಲಿ ಜನ ಸಾಮಾನ್ಯರ ಮಧ್ಯೆ ನಿಂತು ಅವರ ಸಂಕಷ್ಟಗಳಿಗೆ ಹೇಗೆ ಸ್ಪಂದಿಸುತ್ತಿದ್ದರು ಎನ್ನುವುದಕ್ಕೆ ಎಲ್ಲಾ ರಾಜಕಾರಣಿಗಳಿಗೆ ಮಾದರಿ. ಇವರು ರಾಯಭಾಗದ ಹುಲಿ

ಆಗುವುದಕ್ಕೆ ಮೊದಲೇ ಸ್ವಾತಂತ್ರ್ಯ ಹೋರಾಟ ಚಳುವಳಿಯಲ್ಲಿ ಭಾಗವಹಿಸಿದಂತಹ ವ್ಯಕ್ತಿ. ಅವರು ಒಳ್ಳೆಯ ಕ್ರೀಡಾಪಟುಗಳೂ ಕೂಡ ಆಗಿದ್ದರು. ಕೆಲವರಿಗೆ ಅನ್ನ ದಾಸೋಹಿ ಎಂದು ಕರೆದರೆ ಇವರನ್ನು ಅಕ್ಷರ ದಾಸೋಹಿ ಎಂದು ಕರೆಯುತ್ತಿದ್ದರು. ಅವರು ವಿವಿಧ ಶಿಕ್ಷಣ ಸಂಸ್ಥೆಗಳನ್ನು ಆರಂಭ ಮಾಡಿ ಅದರಲ್ಲೂ ವಿಶೇಷವಾಗಿ ಬಡಮಕ್ಕಳಿಗೆ ಉಚಿತ ಶಿಕ್ಷಣ ಕೊಡುವುದರಲ್ಲಿ ಯಶಸ್ವಿಯಾದಂತಹ ಮಹಾಪುರುಷ ಎಂದರೆ ತಪ್ಪಾಗಲಾರದು. ಅವರು ವಿಧಾನಸಭೆ, ರಾಜ್ಯಸಭೆ ಮತ್ತು ಲೋಕಸಭೆ ಸದಸ್ಯರಾಗಿ ಪ್ರತಿನಿಧಿಸಿದ್ದು ಅಷ್ಟೇ ಅಲ್ಲದೆ ೧೯೫೨ರಲ್ಲಿಯೇ ಅವರು ಬಾಂಬೆ ವಿಧಾನಸಭೆಗೆ ಕೂಡ ಆಯ್ಕೆಯಾಗಿದ್ದರು. ಅವರು ವಿವಿಧ ಇಲಾಖೆಗಳಲ್ಲಿ ಕೂಡ ಅವರು ಮಂತ್ರಿಗಳಾಗಿದ್ದರು.

ಅವರು ಸಮಾಜ ಕಲ್ಯಾಣ ಇಲಾಖೆ, ತೋಟಗಾರಿಕೆ ಇಲಾಖೆ, ಸಾರಿಗೆ ಇಲಾಖೆ, ಕಂದಾಯ ಇಲಾಖೆ, ಕೈಗಾರಿಕೆ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಈ ಎಲ್ಲಾ ಇಲಾಖೆಗಳಲ್ಲೂ ಕೂಡ ಬಹಳ ಒಳ್ಳೆಯ ಕೆಲಸಗಳನ್ನು ಮಾಡಿಕೊಂಡು ಶುದ್ಧ ಹಸ್ತದ ರಾಜಕಾರಣಿ ಎಂಬ ಹೆಸರನ್ನು ಕೂಡ ಪಡೆದಿದ್ದರು. ಉತ್ತರ ಕರ್ನಾಟಕದಲ್ಲಿ ಯಾವುದೇ ಸಮಸ್ಯೆ ಬಂದಿದೆಯೆಂದಾಗ, ಮಾನ್ಯ ವಿ.ಎಲ್.ಪಾಟೀಲ್‌ರವರ ಬಳಿಗೆ ಹೋದರೆ ಪರಿಹಾರವಾಗುತ್ತದೆಂಬ ವಿಶ್ವಾಸ ಈ ಭಾಗದ ಎಲ್ಲಾ ಜನರಲ್ಲೂ ಇತ್ತು. ಈ ರೀತಿ ಒಬ್ಬ ಸಮಾಜ ಸುಧಾರಕನನ್ನು ಜನಸಾಮಾನ್ಯರ ಪ್ರತಿನಿಧಿಯನ್ನು ಕಳೆದುಕೊಂಡಿರುವಂಥ ಈ ಸಂದರ್ಭದಲ್ಲಿ, ನಾವು ಅವರಿಗೆ ಹೇಗೆ ಶ್ರದ್ಧಾಂಜಲಿಯನ್ನು ಅರ್ಪಿಸಬೇಕೆಂದರೆ, ಅವರು ಯಾವ ದಿಕ್ಕಿನಲ್ಲಿ ಸಮಾಜ ಸೇವೆಯನ್ನು ಮಾಡಿದರೋ, ಅದು ನಮ್ಮ ಎಲ್ಲಾ ರಾಜಕಾರಣಿಗಳಿಗೂ ಕೂಡ ಅವರ ಜೀವನ ಒಂದು ಮಾದರಿ ಎಂದು ನಾನು ಭಾವಿಸುತ್ತೇನೆ.ಅವರು ನಡೆದು ಬಂದ ದಿಕ್ಕಿನಲ್ಲಿ ನಾವು ಸಮಾಜ ಸೇವೆಯನ್ನು ಮಾಡಿದರೆ, ಅವರ ಆತ್ಮಕ್ಕೆ ನಿಜಕ್ಕೂ ಶಾಂತಿ ಸಿಗುತ್ತದೆಂದು

ಅನಿಸುತ್ತದೆ. ಇವತ್ತು ಅವರನ್ನು ಕಳೆದುಕೊಂಡು ನಾವೆಲ್ಲರೂ ನಷ್ಟವನ್ನು ಅನುಭವಿಸುತ್ತಿದ್ದೇವೆ.ಅವರ ಕುಟುಂಬಕ್ಕೆ ಭಗವಂತನು ಸಮಾಧಾನ ಕೊಡುವಂತೆ ಆಗಲಿ, ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಕೋರುತ್ತೇನೆ.

**ಶ್ರೀ ಉಮೇಶ್ ವಿ.ಕತ್ತಿ (ಕೃಷಿ ಸಚಿವರು)**:- ಮಾನ್ಯ ಅಧ್ಯಕ್ಷರೆ, ಇವತ್ತು ತಾವು ತಂದಿರುವಂಥ ಸಂತಾಪ ಸೂಚನೆಗೆ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಇವತ್ತು ಮಾನ್ಯ ವಿ.ಎಲ್.ಪಾಟೀಲ್‌ರವರು ಬೆಳಗಾವಿ ಜಿಲ್ಲೆಯ ಅತ್ಯಂತ ಹಿರಿಯ ರಾಜಕಾರಣಿಯಾಗಿದ್ದರೆಂದು ಹೇಳುತ್ತೇನೆ. ಇದರ ಜೊತೆಗೆ ಅವರು ನಡೆದು ಬಂದ ದಾರಿಯನ್ನು ನಾವು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಇವರು ಆವತ್ತಿನ ಮುಂಬೈ ಪ್ರಾಂತ್ಯದ ಮೊದಲನೇ ಶಾಸಕರಾಗಿ ಆಯ್ಕೆಯಾಗಿದ್ದರು. ಅದಾದ ಮೇಲೆ ಮೈಸೂರು ಪ್ರಾಂತ್ಯದ ಲೋಕಸಭಾ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿಚಿಕ್ಕೋಡಿ ಮತಕ್ಷೇತ್ರದಿಂದ ಗೆದ್ದಂಥ ಒಬ್ಬ ಧೀಮಂತ ನಾಯಕರೆಂದು ನೆನಪು ಮಾಡಿಕೊಳ್ಳಬೇಕು. ಇವೆಲ್ಲಕ್ಕಿಂತ ಮಿಗಿಲಾಗಿಅವರು ಚಿಕ್ಕಂದಿನಿಂದ ಕೊಲ್ಲಾಪುರದ ಸಾಹುಭಾಯಿಯವರೊಂದಿಗೆ ಆತ್ಮೀಯರಾಗಿ ಇಬ್ಬರೂ ಜೊತೆ ಜೊತೆಯಾಗಿ ಶಾಲೆಯಲ್ಲಿ ಕಲಿತರು. ಅದರಲ್ಲೂ ವಿಶೇಷವಾಗಿ ಕುಸ್ತಿಪಟುವಾಗಿ ಬೆಳೆದಂಥ ದಿವಸಗಳನ್ನು ಪ್ರತಿ ಕುಸ್ತಿಯಲ್ಲಿ ಪಾಲ್ಗೊಳ್ಳುವಂಥ ವಿಚಾರಗಳೆಲ್ಲಾ ಚರ್ಚೆಯಾಗುವಂಥ ದಿವಸಗಳನ್ನು ನಾವು ನೋಡುತ್ತಿದ್ದೆವು.ಇದು ಅಲ್ಲದೇ ಇಡೀ ರಾಜ್ಯದಲ್ಲಿ ಹಿಂದುಳಿದ ವರ್ಗಗಳಿಗೆ ಶ್ರಮಿಸಿದಂಥ ಒಬ್ಬ ಧೀಮಂತ ನಾಯಕರಾಗಿದ್ದರು. ಮುಂಬೈ ಪ್ರಾಂತ್ಯ ಮತ್ತು ಮೈಸೂರು ಪ್ರಾಂತ್ಯ ಈ ಎರಡೂ ರಾಜ್ಯಗಳಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದಂಥವರು. ಇದು ಆದಮೇಲೆ ಅಖಂಡ ಕರ್ನಾಟಕ ರಾಜ್ಯದಲ್ಲಿ ನಾಲ್ಕು ಬಾರಿ ವಿಧಾನಸಭೆಗೆ ಆಯ್ಕೆಯಾಗಿ ಸರ್ಕಾರದ ಎಲ್ಲಾ ಉನ್ನತ ಮಟ್ಟದ ಇಲಾಖೆಗಳ ಮಂತ್ರಿಯಾಗಿತಮ್ಮದೇ ಆದಂಥ ಛಾಪನ್ನು ಮೂಡಿಸುವಂಥ ಕೆಲಸವನ್ನು ಮಾಡಿದ್ದರು.ಅದರಲ್ಲೂ ವಿಶೇಷವಾಗಿ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಾಗಿ ಹಿಂದುಳಿದ ವರ್ಗಕ್ಕೆ ಸಿಗಬೇಕಾದಂಥ ಎಲ್ಲಾ ಸವಲತ್ತುಗ-ಳನ್ನು ಒದಗಿಸುವಂಥ ಪ್ರಯತ್ನದಲ್ಲಿ ಯಶಸ್ಸನ್ನು ಕಂಡಂಥ ಧೀಮಂತ ನಾಯಕರೆಂದು ಹೇಳಬೇಕಾಗುತ್ತದೆ. ೧೯೮೫ರಲ್ಲಿ ನಮ್ಮ ತಂದೆಯವರು ತೀರಿಕೊಂಡ ಮೇಲೆ ಪ್ರಪ್ರಥಮವಾಗಿಚಿಕ್ಕೋಡಿ ಮತಕ್ಷೇತ್ರದಿಂದ ಮರು ಚುನಾವಣೆಯಲ್ಲಿ ಆಯ್ಕೆಯಾಗುವ ಸಂದರ್ಭದಲ್ಲಿ ನಾನು ೨೫ನೇ ವಯಸ್ಸಿನಲ್ಲಿ ಚುನಾವಣೆಯಲ್ಲಿ ಸ್ಪರ್ಧೆ ಮಾಡುತ್ತಿದ್ದ ಸಂದರ್ಭದಲ್ಲಿ ಮಾನ್ಯ ವಿ.ಎಲ್.ಪಾಟೀಲ್‌ರವರು ಕಂದಾಯ ಇಲಾಖೆಯ ಮಂತ್ರಿಗಳಾಗಿದ್ದರು. ನನ್ನ ಕ್ಷೇತ್ರದ ಪ್ರತಿಯೊಂದು ಹಳ್ಳಗಳಿಗೂ ಖುದ್ದಾಗಿ ಭೇಟಿ ಕೊಟ್ಟು ನನ್ನನ್ನು

ಪರಿಚಯ ಮಾಡಿಸಿ ಕೊಟ್ಟು, ನನ್ನನ್ನು ಆಯ್ಕೆ ಮಾಡಿ ಕಳುಹಿಸುವ ಪ್ರಯತ್ನದಲ್ಲಿ ಅವರ ಪಾತ್ರ ಬಹಳ ಮುಖ್ಯವಾದದ್ದು ಎಂದು ಹೇಳುತ್ತೇನೆ. ಅದು ಅಲ್ಲದೇ ಕರ್ನಾಟಕ ರಾಜ್ಯದಒಬ್ಬ ಚಾಣಾಕ್ಷ ರಾಜಕಾರಣಿ ಹಾಗೂ ಛಲಗಾರರೆಂದು ಹೇಳಬೇಕಾಗುತ್ತದೆ. ಇವತ್ತು ರಾಜ್ಯ ಒಬ್ಬ ಹಿಂದುಳಿದ ನಾಯಕರನ್ನು ಕಳೆದುಕೊಂಡಿರುವಂಥ ದು:ಖದಲ್ಲಿ, ಅದರಲ್ಲೂ ವಿಶೇಷವಾಗಿ ಬೆಳಗಾಂ ಜಿಲ್ಲೆಯಲ್ಲಿ ಅತೀ ಹೆಸರು ಆಗಿರುವಂಥ ವಿ.ಎಲ್.ಪಾಟೀಲ್‌ರವರನ್ನು ಬ್ಯಾಕೂಡ್ ಹುಲಿ, ರಾಯಬಾಗ್ ಹುಲಿ ಎಂದು ಅಲ್ಲದೇ, ಈ ಭಾಗದಲ್ಲಿ ವಿ.ಎಲ್.ಪಾಟೀಲ್‌ರವರಂತೆ ಯಾರೂ ಹೆಸರು ತೆಗೆದುಕೊಂಡಂಥ ಉದಾಹರಣೆಗಳು ಇಲ್ಲ. ಬೆಳಗಾಂ ಜಿಲ್ಲೆಯಲ್ಲಿ ಅಣ್ಣನವರೆಂದರೆ ವಿ.ಎಲ್.ಪಾಟೀಲ್ ಒಬ್ಬರೇ ಆಗಿದ್ದರು. ಈ ಭಾಗದಲ್ಲಿ ಆ ರೀತಿಯ ಛಾಪನ್ನು ಮೂಡಿಸಿದಂಥ ಒಬ್ಬ ವ್ಯಕ್ತಿ ಇವತ್ತು ನಮ್ಮನ್ನೆಲ್ಲಾ ಅಗಲಿದ್ದಾರೆ, ಅವರಿಗೆ ವಿಶೇಷವಾಗಿ ಶ್ರದ್ಧಾಂಜಲಿಯನ್ನು ಆರ್ಪಿಸುವುದರ ಜೊತೆಗೆ, ಅವರ ಕುಟುಂಬವರ್ಗದವರಿಗೆ ದು:ಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲಿ ಎಂದು ಹೇಳುತ್ತಾ, ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಅಧ್ಯಕ್ಷರು:-** ದಿವಂಗತರಾದ ವಿ.ಎಲ್.ಪಾಟೀಲ್‌ರವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

**ಅಧ್ಯಕ್ಷರು:-** ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

**ಅಧ್ಯಕ್ಷರು:-** ಈಗ ಪ್ರಶ್ನೋತ್ತರ

**2. ಕಾವೇರಿ ನೀರನ್ನು ಬಿಟ್ಟಿರುವುದು ಮತ್ತು ಕೆಹೆಚ್‌ಟಿ ಕರ್ಮಕಾಂಡದ ಬಗ್ಗೆ**

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಅಧ್ಯಕ್ಷರೆ, ....